ದೇವತೆಗಳೂ ಮನುಷ್ಯರೂ ರಾಕ್ಷಸರೂ ಪ್ರಜಾಪತಿಯ ಮಕ್ಕಳು. ಎಷ್ಟೋ ಸಮಯ ಅವರೆಲ್ಲರೂ ತಂದೆಯ ಸೇವೆಯನ್ನು ಮಾಡಿಕೊಂಡಿದ್ದರು. ಒಮ್ಮೆ ದೇವತೆಗಳೆಲ್ಲ ಒಂದಾಗಿ ತಂದೆಯ ಬಳಿಗೆ ತೆರಳಿ 'ನಮಗೆ ಉಪದೇಶವನ್ನು ಮಾಡು ತಂದೆಯೆ' ಎಂದು ಪ್ರಾರ್ಥಿಸಿದರು. ಆಗ ಪ್ರಜಾಪತಿಯು 'ದ' ಎಂದು ಹೇಳಿ 'ಅರ್ಥವಾಯಿತೋ?' ಎಂದು ಕೇಳಿದ. ದೇವತೆಗಳೆಲ್ಲರೂ 'ಅರ್ಥವಾಯಿತು' ಎಂದರು.

ದೇವತೆಗಳತ್ತ ತಿರುಗಿ ಪ್ರಜಾಪತಿ ಕೇಳಿದ: 'ನಿಮಗೆ ಏನು ಅರ್ಥವಾಯಿತು ಹೇಳಿರಿ?' 'ನಮಗೆ ದಾಮ್ಯತದಮನವನ್ನು ಅಭ್ಯಾಸ ಮಾಡಿರಿಎಂದು ಉಪದೇಶಿಸಿರುವೆ ಅಲ್ಲವೆ?' ಎಂದರು ದೇವತೆಗಳು. 'ಹೌದು' ಎಂದನು ಪ್ರಜಾಪತಿ.

ದೇವತೆಗಳಾದ ಬಳಿಕ ಈಗ ಮನುಷ್ಯರ ಸರದಿ. ಮನುಷ್ಯರೆಲ್ಲರೂ ಪ್ರಜಾಪತಿಯಲ್ಲಿಗೆ ಹೋಗಿ 'ತಂದೆ, ನಮಗೂ ಉಪದೇಶವನ್ನು ಮಾಡು' ಎಂದು ಕೇಳಿಕೊಂಡರು. ಆಗ ಪ್ರಜಾಪತಿಯು 'ದ' ಎಂದು ನುಡಿದು, 'ಅರ್ಥವಾಯಿತೆ?' ಎಂದು ಮನುಷ್ಯರನ್ನು ಕೇಳಿದ. 'ಅರ್ಥವಾಯಿತು' ಎಂದರು ಅವರು. 'ಹಾಗಾದರೆ ಏನು ಅರ್ಥವಾಯಿತು ಹೇಳಿ ನೋಡೋಣ?' ಎಂದು ಕೇಳಿದ ಪ್ರಜಾಪತಿ. 'ದತ್ತದಾನ ಮಾಡುವುದನ್ನು ಕಲಿಯಿರಿ – ಎಂದೇ ಅಲ್ಲವೆ ನೀನು ನಮಗೆ ಉಪದೇಶಿಸಿರುವುದು?' ಎಂದರು ಮನುಷ್ಯರು. 'ಹೌದು' ಎಂದು ತಲೆಯಾಡಿಸಿದ ಪ್ರಜಾಪತಿ.

ಆಮೇಲಿನ ಸರದಿ ರಾಕ್ಷಸರದ್ದು. 'ನಮಗೂ ಉಪದೇಶವನ್ನು ನೀಡು ತಂದೆಯೆ' ಎಂದು ಅಸುರರು ಪ್ರಾರ್ಥಿಸಿಕೊಂಡರು. ಪ್ರಜಾಪತಿ ಅವರಿಗೂ 'ದ' ಎಂದಷ್ಟೆ ನುಡಿದು, 'ಅರ್ಥವಾಯಿತೋ?' ಎಂದು ಪ್ರಶ್ನಿಸಿದ. 'ನಮಗೆ ಚೆನ್ನಾಗಿಯೇ ಅರ್ಥವಾಯಿತು' ಎಂದರು ರಕ್ಕಸರು. 'ಮಕ್ಕಳೇ, ಏನು ಅರ್ಥವಾಯಿತು ಹೇಳಿ?' ಎಂದ ಪ್ರಜಾಪತಿ. 'ದಯಧ್ವದಯಾವಂತರಾಗುವುದನ್ನು ಕಲಿತುಕೊಳ್ಳಿ –ಎಂಬುದನ್ನೇ ಅಲ್ಲವೆ ನೀನು ಹೇಳಿರುವುದು?' ಎಂದು ಸಂತೋಷದಿಂದ ನುಡಿದರು ರಾಕ್ಷಸರು. 'ಹೌದು, ಸರಿಯಾಗಿಯೇ ತಿಳಿದುಕೊಂಡಿರುವಿರಿ' ಎಂದು ಮುಗುಳ್ನಕ್ಕ ಪ್ರಜಾಪತಿ.

★★★

**ಉಪನಿಷತ್ತುಗಳಲ್ಲಿ ಅಲ್ಲಲ್ಲಿ ಕತೆಗಳಿವೆ. ಮೇಲಣ ಕತೆ ಬೃಹದಾರಣ್ಯಕ ಉಪನಿಷತ್ತಿನಲ್ಲಿದೆ. ಈ ಕತೆಯ ಧ್ವನಿಯೂ ಸಾರಸ್ಯಕರವಾಗಿದೆ.**

**ಮೊದಲಿಗೆ ನಾವಿಲ್ಲಿ ಗಮನಿಸಬೇಕಾದದ್ದು ರಾಕ್ಷಸರು, ದೇವತೆಗಳು ಮತ್ತು ಮನುಷ್ಯರು – ಎಲ್ಲರಿಗೂ ಒಬ್ಬನೇ ತಂದೆ; ಅವನೇ ಪ್ರಜಾಪತಿ – ಬ್ರಹ್ಮ ಎಂದೂ ಅವನನ್ನು ಕರೆಯಬಹುದು. ನಾವು ಮನುಷ್ಯರು ದೇವತೆಗಳನ್ನು ಶ್ರೇಷ್ಠರೆಂದೂ ರಾಕ್ಷಸರನ್ನು ನೀಚರೆಂದೂ ನಮ್ಮನ್ನು ಅಸಹಾಯಕರೆಂದೂ ತಿಳಿದುಕೊಳ್ಳುತ್ತೇವೆ. ಆದರೆ ಈ ಮೂವರು ಕೂಡ ಒಬ್ಬನೇ ತಂದೆಯ ಮಕ್ಕಳು. ಹೀಗಿದ್ದರೂ ಮೂವರು ಸಹೋದರರ ಗುಣದಲ್ಲಿಯೂ ತುಂಬ ವ್ಯತ್ಯಾಸಗಳುಂಟು; ಅದೂ ಎದ್ದು ಕಾಣುವಂಥ ಭಿನ್ನತೆಗಳು. ಸಹೋದರರ ಸ್ವಭಾವದಲ್ಲಿಯೇ ಅಷ್ಟೊಂದು ವ್ಯತ್ಯಾಸಗಳಿಗೆ ಕಾರಣವಾದರೂ ಏನು? ಉಪನಿಷತ್ತು ಇದನ್ನು ಮಾರ್ಮಿಕವಾಗಿ ವಿಶ್ಲೇಷಿಸುತ್ತಿದೆ.**